# ಕನ್ನಡ (KANNADA)

# (208)

## ಮೂಲ್ಯಾಂಕನ ಪತ್ರ–(I)

## Assignment-I

### ಪಾಠಗಳು 1 ರಿಂದ 10

**ಒಟ್ಟು ಅಂಕಗಳು : 25**

**ಸೂಚನೆ** : 1. ಎಲ್ಲ ಪ್ರಶ್ನೆಗಳನ್ನು ಉತ್ತರಿಸುವುದು ಅನಿವಾರ್ಯವಾಗಿದೆ. ಎಲ್ಲ ಪ್ರಶ್ನೆಗಳಿಗೆ ಸಮಾನ ಅಂಕಗಳು.

2. ಉತ್ತರ ಪತ್ರಿಕೆಯ ಮೊದಲ ಪುಟದ ಮೇಲ್ಗಡೆ ನಿಮ್ಮ ಹೆಸರು, ಅನುಕ್ರಮ ಸಂಖ್ಯೆ, ಅಧ್ಯಯನ ಕೇಂದ್ರ (A I)ದ ಹೆಸರು ಮತ್ತು ವಿಷಯ ಇವುಗಳನ್ನು ಸ್ಪಷ್ಟವಾಗಿ ಬರೆಯಿರಿ.

ಪ್ರಶ್ನೆ 1. ಕೆಳಗೆ ಕೊಟ್ಟಿರುವ ಮೂರು ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಮಾತ್ರ 60 ರಿಂದ 80 ಶಬ್ದಗಳಲ್ಲಿ ಉತ್ತರಿಸಿರಿ.

(ಕ) 'ಜೀವನವನೆ ದೇವಿಗೆರೆವೆ
ಬಿಡುತೆ ಗುಡಿಯ ಕಟ್ಟಲು'
ಎಂಬ ಕವಿಯ ಮನದಾಸೆಯು 'ಭರತ ಭೂಮಿ ನನ್ನ ತಾಯಿ' ಎಂಬ ಕವಿತೆಯಲ್ಲಿ ಎಷ್ಟು ಆಳವಾಗಿ ವ್ಯಕ್ತವಾಗಿದೆ ಎಂಬುದನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ. ಕಾವ್ಯ ಸೌಂದರ್ಯದ ಬಗ್ಗೆ ಚರ್ಚಿಸಿರಿ.

(ಖ) 'ಅಕ್ಕರೆಯ ದಯಾನಿಕೆ'ಯ ಬಗ್ಗೆ ಕವಿಗೆ ಯಾವ ಭಾವನೆ, ಸ್ಥಾನ– ಮಾನಗಳಿವೆ?

(ಗ) 'ನನ್ನ ಹರಣ, ನಿನಗೆ ಶರಣ' ಎಂಬ ಪಂಕ್ತಿಗಳ ಆಧಾರದ ಮೇಲೆ ಕವಿತೆಯಲ್ಲಿ ವ್ಯಕ್ತವಾಗಿರುವ ಕವಿಯ ಸಮರ್ಪಣಾ ಭಾವವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

ಪ್ರ. 2. ಕೊಟ್ಟ ಮೂರು ಪ್ರಶ್ನೆಗಳಲ್ಲಿ ಎರಡನ್ನು ಮಾತ್ರ 60 ರಿಂದ 80 ಶಬ್ದಗಳಲ್ಲಿ ಉತ್ತರಿಸಿರಿ.

(ಕ). 'ಹೆಣ್ಣೊಬ್ಬಳ ಕನಸು' ಪದ್ಯದ ಆಧಾರದ ಮೇಲೆ ಹೆಣ್ಣಿನ ಸೌಂದರ್ಯವನ್ನು ಸವಿಯ ಬಯಸುವ ಕವಿಯ ಪರಿಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

(ಬ) 'ಸಮಸ್ತ ಜೀವ ಜಾಲವೂ ನವಚೇತನ ಪಡೆದು ಮುಂದುವರೆಯಲು ಬೆಳಗಿನ ಜಾವವೇ ಪ್ರಶಸ್ತವಾದ ಸಮಯ' ಈ ಹೇಳಿಕೆಯನ್ನು ಸಮರ್ಥಿಸಿ ಬೆಳಗಿನ ಜಾವದ ಮಹತ್ವವನ್ನು ವಿವರಿಸಿರಿ.

(ಗ) 'ದಿವವನಿಲ್ಲಿ ಈ ನೆಲಕ್ಕೆ ಎಳೆದು ತರಲು' ತರುಣರು ಯಾವ–ಯಾವ ಅಡೆತಡೆಗಳನ್ನು ಎದುರಿಸಬೇಕಾಗ ಬಹುದು 'ನಾವೆಲ್ಲರೂ ಒಂದೇ ಜಾತಿ' ಕವಿತೆಯ ಆಧಾರದ ಮೇಲೆ ವಿವರಿಸಿರಿ.

ಪ್ರ. 3. 250 ಪದಗಳನ್ನು ಬಳಸಿ ಉತ್ತರಿಸಿರಿ.

‘ಆಹುತಿ’– ಪಾಠದಲ್ಲಿ ಕಾಣುವ ಸಾಮಾಜಿಕ ಸಮಸ್ಯೆಗೆ ಕಾರಣಗಳು ಯಾವುವು? ಅವಕ್ಕೆ ನಿಮಗನಿಸಿದ ಪರಿಹಾರಗಳಾವವು?

ಅಥವಾ

‘ಆಗಿನ ಕಾಲದಲ್ಲಿ ನನಗೆ ನಾನೇ ಕೋಚ್’ ಎಂಬ ಕೆಂಪಯ್ಯನವರಿಗೂ ಈಗಿನ ಆಟಗಾರರಿಗೂ ಹೋಲಿಸಿ ಒಂದು ವಾಕ್ಯವೃಂದವನ್ನು ಬರೆಯಿರಿ.

ಪ್ರ. 4.ಪ್ರಾಥಮಿಕ ಶಾಲಾ ಶಿಕ್ಷಕ/ ಶಿಕ್ಷಕಿಯ ಹುದ್ದೆಗೆ ಅರ್ಜಿ ಕರೆಯಲಾಗಿದೆ ಎಂದೂ, ನೀವು ಅರ್ಹತೆಯುಳ್ಳವರಾಗಿದ್ದು ನಿಮ್ಮ ಹೆಸರು ವಿಜಯಾ/ವಿನಯ ಎಂದೂ ಊಹಿಸಿ ಈ ಹುದ್ದೆಗಾಗಿ ಕೋರಿ ಶಿಕ್ಷಣಾಧಿಕಾರಿಗಳಿಗೆ ಅರ್ಜಿ ಬರೆಯಿರಿ.

ಅಥವಾ

ನೀವು ಹತ್ತನೆಯ ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾಗಿದ್ದೀರಿ. ನಿಮ್ಮ ಹೆಸರು ನವೀನ/ನಮ್ರತಾ ಎಂದಿದೆ. ನೀವು ಮನೆ ಬದಲಾಯಿಸಿದ್ದರಿಂದ ಸ್ಕೂಲನ್ನೂ ಬದಲಾಯಿಸುವ ಪ್ರಸಂಗ ಬಂದಿದೆ. ಈ ನಿಮ್ಮ ಸಮಸ್ಯೆಯನ್ನು ಕುರಿತು ಸ್ಕೂಲು ಬದಲಾಯಿಸಲು ಅನುಮತಿಯನ್ನು ಕೋರಿ ನಿಮ್ಮ ಶಾಲಾ ಮುಖ್ಯೋಪಾಧ್ಯಾಯರಿಗೆ ಮನವಿ ಪತ್ರ ಬರೆಯಿರಿ.

ಪ್ರ. 5. ನಮ್ಮ ದೇಶದ ಪ್ರಸ್ತುತ ಸಮಾಜದಲ್ಲಿ ಶಿಕ್ಷಿತ –ಮಹಿಳೆಯರ ಸ್ಥಾನದ ಬಗ್ಗೆ ಇಬ್ಬರು ಮಹಿಳೆಯರ ನಡುವೆ ನಡೆದ ಚರ್ಚೆಯನ್ನು ಕಲ್ಪಿಸಿ ಬರೆಯಿರಿ. ಹಾಗೂ ನಮ್ಮ ದೇಶದಲ್ಲಿ ಯಶಸ್ವಿಯಾದ ಹತ್ತು ಮಹಿಳೆಯರ ಚಿತ್ರಗಳ ಒಂದು ಫೈಲ್ ತಯಾರಿಸಿ ಅವರವರ ಕಾರ್ಯಕ್ಷೇತ್ರ, ಸಾಧನೆ, ಕೊಡುಗೆಗಳ ಬಗ್ಗೆ ಮಾಹಿತಿ–ಬರೆಯಿರಿ.

**ಕನ್ನಡ (KANNADA)**

# (208)

**ಮೂಲ್ಯಾಂಕನ ಪತ್ರ–(II)**

## Assignment-II

**(ಪಾಠಗಳು 11 ರಿಂದ 20 ವರೆಗೆ)**

**ಒಟ್ಟು ಅಂಕಗಳು : 25**

**ಸೂಚನೆ** : 1. ಎಲ್ಲ ಪ್ರಶ್ನೆಗಳನ್ನು ಉತ್ತರಿಸುವುದು ಅನಿವಾರ್ಯವಾಗಿದೆ. ಎಲ್ಲ ಪ್ರಶ್ನೆಗಳಿಗೆ ಸಮಾನ ಅಂಕಗಳು.

2. ಉತ್ತರ ಪತ್ರಿಕೆಯ ಮೊದಲ ಪುಟದ ಮೇಲ್ಗಡೆ ನಿಮ್ಮ ಹೆಸರು, ಅನುಕ್ರಮ ಸಂಖ್ಯೆ, ಅಧ್ಯಯನ ಕೇಂದ್ರ (A I)ದ ಹೆಸರು ಮತ್ತು ವಿಷಯ ಇವುಗಳನ್ನು ಸ್ಪಷ್ಟವಾಗಿ ಬರೆಯಿರಿ.

ಪ್ರಶ್ನೆ 1. ಕೆಳಗೆ ಕೊಟ್ಟಿರುವ ಮೂರು ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಮಾತ್ರ **೬೦** ರಿಂದ **೮೦** ಶಬ್ದಗಳಲ್ಲಿ ಉತ್ತರಿಸಿರಿ.

(ಕ) 'ಫೈರ ಅಲಾರಾಂ ಬೆಲ್' ಮಾಡಬೇಕಾದ ಪ್ರಸಂಗ ಲೇಖಕರಿಗೆ ಏಕೆ ಬಂತು? ಮತ್ತು ಅವರು ಅಲ್ಲಿಂದ ಪಾರಾದ ಬಗೆ ಹೇಗೆ? ವಿವರಿಸಿರಿ.

(ಖ) ಬಸವಣ್ಣನವರ ದೃಷ್ಟಿಯಲ್ಲಿ 'ನುಡಿ' ಹೇಗಿರಬೇಕು?

(ಗ) ದೇವರ ದಾಸಿಮಯ್ಯನು ಯಾರನ್ನು 'ಕುನ್ನಿ'ಗಳೆಂದು ಕರೆದಿದ್ದಾನೆ? ಏಕೆ?

ಪ್ರ. 2. ಈ ಕೆಳಗಿನ ಮೂರರಲ್ಲಿ ಎರಡು ಪ್ರಶ್ನೆಗಳಿಗೆ 60 ರಿಂದ 80 ಪದಗಳಷ್ಟು ಉತ್ತರ ಬರೆಯಿರಿ.

(ಕ) ಜೀವಕ್ಕೆ ಯಾವ ಯಾವ ಚಿಂತೆಗಳು ಬೆಂಬತ್ತಿವೆ? ದಾಸರು ಅವುಗಳ ಪರಿಹಾರಕ್ಕೆ ಹೇಳಿರುವ ಉಪಾಯವೇನು?

(ಖ) ಮನೆಯಲ್ಲಿ ಉಪ್ಪಿಲ್ಲದೆ ಒದ್ದಾಡುವ ಪ್ರಸಂಗ ಕುರಿತು ಶಾಲಾ ಮಾಸ್ತರರ ಸ್ಥಿತಿ–ಗತಿಗಳ ಬಗ್ಗೆ ಶಬ್ದ ಚಿತ್ರಣ ಬರೆಯಿರಿ.

(ಗ) ಪ್ರಗತಿ ಪಥದಲ್ಲಿರುವ 'ನನ್ನೂರು' ಏನೇನು ಕಳೆದುಕೊಳ್ಳುತ್ತದೆ? ಈ ವಿಷಯದಲ್ಲಿ ನಿಮ್ಮ ಕಳವಳವನ್ನು ವ್ಯಕ್ತಪಡಿಸಿರಿ.

ಪ್ರ. 3. 250 ಪದಗಳನ್ನು ಬಳಸಿ ಉತ್ತರಿಸಿರಿ.

ಇನ್ಸ್‌ಪೆಕ್ಟರ ಬಂದಾಗ ಶಾಲೆಯಲ್ಲಿ ಉಂಟಾದ ಗೊಂದಲದ ಪ್ರಸಂಗವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿರಿ.

ಅಥವಾ

'ನನ್ನ ಸೋಬಾನದಲ್ಲೇ ಏಸೋ ಮದುವೆ ಮಾಡಿದ್ದೀನಿ' ಎನ್ನು ಮುದುಕಿ ಚಿಕ್ಕಮ್ಮನ ಆತಂಕಕ್ಕೆ ಕಾರಣಗಳೇನು? ನಿಮ್ಮೂರಿನಲ್ಲೂ ನಿಮ್ಮ ಕಣ್ಣೆದುರಲ್ಲೇ ಆಗಿರುವ ಬದಲಾವಣೆಗಳ ಬೆಳಕಿನಲ್ಲಿ ಹಳೆಯದನ್ನು ಕಳೆದುಕೊಂಡ ದುಃಖವಿದೆಯೇ? ಅಥವಾ ಹೊಸದನ್ನು ಪಡೆದ ಸಂತೋಷವಿದೆಯೇ? ವಿಶ್ಲೇಷಿಸಿ ಬರೆಯಿರಿ.

ಪ್ರ. 4. 250 ಪದಗಳಿಗೆ ಮೀರದಂತೆ ಉತ್ತರಿಸಿರಿ.

ತ್ರಿಪದಿಗಳಲ್ಲಿ ವ್ಯಕ್ತವಾಗಿರುವ ಹೆಣ್ಣಿನ ತವರಿನ ಹಂಬಲ ಮತ್ತು ಮನೆಯಲ್ಲಿ ಮಕ್ಕಳಿರಲೆಂದು ಬಯಸುವ ಭಾವವನ್ನು ನಿಮ್ಮ ಮಾತುಗಳಲ್ಲಿ ವಿವರಿಸಿ. ತ್ರಿಪದಿಗಳ ಶೈಲಿಯ ಬಗ್ಗೆ ಒಂದೆರಡು ವಾಕ್ಯ ಬರೆಯಿರಿ.

ಅಥವಾ

ತಾನು ಕಂಡ ಸತ್ಯವನ್ನು ಬಚ್ಚಿಡಲು ಕಷ್ಟಪಟ್ಟ ಕ್ಷೌರಿಕನ ಅವಸ್ಥೆಯನ್ನು ನಿಮ್ಮ ಮಾತುಗಳಲ್ಲಿ ಬಣ್ಣಿಸಿರಿ. ಕೊನೆಗೂ ಅವನಿಗೆ ಶಿಕ್ಷೆ ತಪ್ಪಿತೆ?

ಪ್ರ. 5. ಪ್ರಾಣಿ ಜಗತ್ತಿನಲ್ಲಿ ಸಹಜೀವನ (ecological balance) ದ ಬಗ್ಗೆ ವಿವರವಾಗಿ ಬರೆದು ನಿಮ್ಮ ಹೇಳಿಕೆಗಳನ್ನು ಸಮರ್ಥಿಸುವ ಚಿತ್ರಗಳನ್ನು ಅಂಟಿಸಿ ಒಂದು folder ತಯಾರಿಸಿರಿ.

# ಕನ್ನಡ (KANNADA)

# (208)

## ಮೂಲ್ಯಾಂಕನ ಪತ್ರ–(III)

## Assignment-III

## (ಪಾಠಗಳು 21 ರಿಂದ 31 ವರೆಗೆ)

**ಒಟ್ಟು ಅಂಕಗಳು : 25**

**ಸೂಚನೆ** : 1. ಎಲ್ಲ ಪ್ರಶ್ನೆಗಳನ್ನು ಉತ್ತರಿಸುವುದು ಅನಿವಾರ್ಯವಾಗಿದೆ. ಎಲ್ಲ ಪ್ರಶ್ನೆಗಳಿಗೆ ಸಮಾನ ಅಂಕಗಳು.

2. ಉತ್ತರ ಪತ್ರಿಕೆಯ ಮೊದಲ ಪುಟದ ಮೇಲ್ಗಡೆ ನಿಮ್ಮ ಹೆಸರು, ಅನುಕ್ರಮ ಸಂಖ್ಯೆ, ಅಧ್ಯಯನ ಕೇಂದ್ರ (A I)ದ ಹೆಸರು ಮತ್ತು ವಿಷಯ ಇವುಗಳನ್ನು ಸ್ಪಷ್ಟವಾಗಿ ಬರೆಯಿರಿ.

ಪ್ರಶ್ನೆ 1. ಕೆಳಗೆ ಕೊಟ್ಟಿರುವ ಮೂರು ಪ್ರಶ್ನೆಗಳಲ್ಲಿ ಎರಡು ಪ್ರಶ್ನೆಗಳಿಗೆ ಮಾತ್ರ **೬೦** ರಿಂದ **೮೦** ಶಬ್ದಗಳಲ್ಲಿ ಉತ್ತರಿಸಿರಿ.

(ಕ) 'ವೀರರಾಣಿ ಚೆನ್ನಮ್ಮ'ನ ಜೀವನವು ನಮಗೆ ಯಾವ ಪಾಠ ಕಲಿಸಿದೆ? ಪಾಠದ ಆಧಾರದ ಮೇಲೆ ವಿವರಿಸಿರಿ?

(ಖ) ಹಿಮಾಲಯವನ್ನು ಹೊಲೆಗೆಡಿಸಿದ ಪರಿಯನ್ನೂ, ಅದಕ್ಕೆ ಪರಿಹಾರವನ್ನೂ ಪಾಠದ ಆಧಾರದ ಮೇಲೆ ವಿವರಿಸಿರಿ. ನಿಮ್ಮ ಸಲಹೆಗಳನ್ನು ಸೂಚಿಸಿ ಬರೆಯಿರಿ.

(ಗ) ಹುಯ್ಯಲುಗಾರನ ಕರೆಗೆ ಉತ್ತರ– ಕುಮಾರನ ಪ್ರತಿಕ್ರಿಯೆಗಳನ್ನು ನಿಮ್ಮ ಮಾತುಗಳಲ್ಲಿ ಬಣ್ಣಿಸಿರಿ?

ಪ್ರ. 2. ಯಾವುದೇ ಎರಡಕ್ಕೆ ಮಾತ್ರ ಉತ್ತರಿಸಿರಿ. ನಿಮ್ಮ ಉತ್ತರ ೬೦ ರಿಂದ ೮೦ ಶಬ್ದಗಳಷ್ಟಿರಲಿ.

(ಕ) ಅತ್ತಿಮಬ್ಬೆಯ ವ್ಯಕ್ತಿತ್ವವನ್ನು ನಿಮ್ಮ ಮಾತುಗಳಲ್ಲಿ ವರ್ಣಿಸಿರಿ.

(ಖ) ಬನವಾಸಿಯಲ್ಲಿಯೇ ಪುನಃ ಜನ್ಮ ತಾಳಲು ಕವಿ ಏಕೆ ಹಾರೈಸುತ್ತಾನೆ?

(ಗ) 'ಶಠಂ ಪ್ರತಿ–ಶಾಠ್ಯಂ' ಎಂಬ ಮಾತಿಗೆ ಗಾಂಧೀಜಿಯವರ ಉತ್ತರವೇನು? ಅವರ ವ್ಯಕ್ತಿತ್ವದ ಹಿರಿಮೆಯ ಹಲವಾರು ಮುಖಗಳನ್ನು ಪರಿಚಯಿಸಿರಿ.

ಪ್ರ. 3. ೨೫೦ ಪದಗಳ ಪರಿಚ್ಛೇದ ಬರೆಯಿರಿ.

ಪ್ರಾಣಿ ಜೀವನದಲ್ಲಿ ನೈಸರ್ಗಿಕವಾದ ರಕ್ಷಣಾ ತಂತ್ರಗಳನ್ನು ಉದಾಹರಣೆ ಸಹಿತ ವಿವರಿಸಿರಿ.

ಅಥವಾ

ಕೆರೆಯ ದಡದಲ್ಲಿ ಲೇಖಕರು ಕಂಡು ಆಶ್ಚರ್ಯ–ಪಟ್ಟ ಪ್ರಾಣಿಗಳ ವೈಶಿಷ್ಟ್ಯಗಳೇನು? ಉದಾಹರಣೆಗಳೊಂದಿಗೆ ವಿವರಿಸಿರಿ.

ಪ್ರ. 4. ೨೫೦ ಪದಗಳಲ್ಲಿ ಉತ್ತರಿಸಿರಿ.

'ಮಂಡೋದರಿ' ನಾಟಕ–ದಲ್ಲಿ ಮೂಡಿ ಬಂದ ಮಂಡೋದರಿಯ ವ್ಯಕ್ತಿತ್ವವನ್ನು ಸರಿಯಾದ ಉದಾಹರಣೆಗಳೊಂದಿಗೆ ವಿವರಿಸಿರಿ.

ಅಥವಾ

'ಸಾತ್ವಿಕ ಪ್ರೇಮವೇ ಸ್ತ್ರೀ ರೂಪವನ್ನು ಧರಿಸಬೇಕು' ಎಂದು ವಿಭೀಷಣನು ಹೇಳುವ ಮಾತನ್ನು ಸಮರ್ಥಿಸಿ ಒಂದು ಪರಿಚ್ಛೇದ ಬರೆಯಿರಿ.

ಪ್ರ. 5. ಹಳ್ಳಿಯೊಂದರಲ್ಲಿ 'ಈರಮ್ಮ' ಮತ್ತು 'ಸಾತಮ್ಮ' ನೆರೆಹೊರೆಯರು. ಜೀವದ ಗೆಳತಿಯರು. ಈರಮ್ಮನಿಗೆ ಒಬ್ಬ ಮಗ. ಚುರುಕಾದ ಹುಡುಗ ಯಾವಾಗಲೂ ನಗೆಯ ಚಿಲುಮೆ. ಇವಳದು ಸುಖೀ ಪರಿವಾರ. ಇವಳ ಗಂಡ ಪಟ್ಟಣವೊಂದರಲ್ಲಿ ಮಿಲ್‌ನಲ್ಲಿ ಕೆಲಸ ಮಾಡುತ್ತಾನೆ. ಆಗಾಗ ಹಳ್ಳಿಗೆ ಭೇಟಿ ಕೊಟ್ಟು ತನ್ನ ಸಂಸಾರ ನೋಡಿಕೊಳ್ಳುವ ಪರಿಪಾಠವಿಟ್ಟುಕೊಂಡಿದ್ದಾನೆ.

ಸಾತಮ್ಮ ಕಷ್ಟಪಟ್ಟು ಸಂಸಾರ ಸಾಗಿಸುತ್ತಿದ್ದರೂ ಉಂಡುಟ್ಟು ಸುಖವಾಗಿದ್ದಾಳೆ. ಹದಿನಾರು ವಯಸ್ಸಿನ ಮಗ ಮತ್ತು ಹತ್ತು ವರ್ಷದ ಮಗಳೊಂದಿಗೆ ಸಂಸಾರ ಸಾಗಿಸುತ್ತಿದ್ದಾಳೆ. ಇವಳ ಗಂಡನೂ ಈರಮ್ಮನ ಗಂಡನ ಹಾಗೆ ಪಟ್ಟಣದಲ್ಲಿ ಕೆಲಸದಲ್ಲಿದ್ದಾನೆ. ಆಗಾಗ ಬಂದು ಹೋಗುತ್ತಿರುತ್ತಾನೆ.

ಎಲ್ಲವೂ ಸರಿಯಾಗಿಯೇ ನಡೆಯುತ್ತಿದ್ದಂತೆ ಕಂಡರೂ ಅದೇಕೋ ಈರಮ್ಮನ ಗಂಡ ಇತ್ತೀಚೆಗೆ ಮಂಕಾಗಿದ್ದಾನೆ. ಮನೆಯಲ್ಲಿ ಮೊದಲಿದ್ದ ಶಾಂತಿ ಸಮಾಧಾನಗಳಿಲ್ಲ. ಸಾತಮ್ಮನಿಗೂ ಅವಳ ಮಗನಿಗೂ ಏನೂ ತೋಚದಂತಾಗಿದೆ. ಎಲ್ಲರಿಗೂ ಆತಂಕ, ದಿಗಿಲು!!

ಒಂದು ದಿನ ಸಾತಮ್ಮನ ಗಂಡ ಸುದ್ದಿ ತಂದರು.–ಈರಮ್ಮನ ಗಂಡನಿಗೆ AIDS ಅಂಟಿದೆ ಎಂದು. ಈ ರೋಗದ ಬಗ್ಗೆ ಏನೂ ಅರಿಯದ, ಇವೆರಡೂ ಸುಖೀ ಪರಿವಾರಗಳ ನಿದ್ದೆಗೆಡಿಸಿದ ಈ ರೋಗದ ಬಗ್ಗೆ ತಿಳಿಯಲು ಸಾತಮ್ಮನ ಮಗನಿಗೆ ಕುತೂಹಲ ಕೆರಳಿತು. ಶಾಲೆಯಲ್ಲಿ ಆಗಾಗ ಕೇಳಿ ಬರುತ್ತಿದ್ದ ಈ ರೋಗದ ಬಗ್ಗೆ ಮಾಹಿತಿ ಪಡೆಯಲು ಬಯಸಿ ಹೆಲ್ಥ್‌ಸೆಂಟರ್‌ಗೆ ಭೇಟಿ ಕೊಡುತ್ತಾನೆ. ಈತ ಮತ್ತು ವೈದ್ಯರ ನಡುವೆ ನಡೆದ ಸಂಭಾಷಣೆಯನ್ನು ಕಲ್ಪಿಸಿ ಈ ವಿಷಯದಲ್ಲಿ ವಿವರವಾಗಿ ಮಾಹಿತಿ ಪಡೆಯಿರಿ. AIDS ಎಂಬ ರೋಗ, ಅದಕ್ಕೆ ಕಾರಣ ಮತ್ತು ತಡೆಯುವ ಉಪಾಯಗಳ ಬಗ್ಗೆ ಪ್ರಶ್ನೋತ್ತರ–ರೂಪದಲ್ಲಿ ಒಂದು ಚಾರ್ಟ್ ತಯಾರಿಸಿ.

ವಿಶ್ವದಲ್ಲಿ ಈ ರೋಗದ ತಡೆಗೆ ತಿಳುವಳಿಕೆ ಮೂಡಿಸಲು ಮಾಡಲಾಗುತ್ತಿರುವ ಪ್ರಯತ್ನಗಳ ಚಿತ್ರಗಳನ್ನು ಸಂಗ್ರಹಿಸಿರಿ, ಅಂಟಿಸಿರಿ.